# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಆಯುಕ್ತರವರ ಕಛೇರಿ, ನರಸಿಂಹರಾಜ ಚೌಕ, ಬೆಂಗಳೂರು 560002

ಸಂಖ್ಯೆ:ಆಆಶಾ/ಪಿಎಸ್‌ಆರ್(4) 4568 /2019-20 ದಿನಾಂಕ: 28/10/2019

## ಸುತ್ತೋಲೆ

ವಿಷಯ:- ಪಾಲಿಕೆಯ ನೇರ ಸಂಭಾವನೆ ಬಯೋಮೆಟ್ರಿಕ್ ಹಾಜರಾತಿ ಮುಖಾಂತರ ಸ್ವಚ್ಛತೆಯಲ್ಲಿ ತೊಡಗಿರುವ ಪೌರಕಾರ್ಮಿಕರ ವಯೋನಿವೃತ್ತಿ, ವಯೋನಿವೃತ್ತಿ ನಂತರ ಪರಿಹಾರ/ಹಿಡಿಗಂಟು ಮೊತ್ತದ ಪಾವತಿ ಮುಖಾಂತರ ಬರುವ ಬಡ್ಡಿ ರೂಪದ ಪಿಂಚಣಿ, ಕರ್ತವ್ಯ ನಿರ್ವಹಣೆ ಸಮಯದಲ್ಲಿ ಮೃತರಾದಲ್ಲಿ ಪರಿಹಾರ ಹಾಗೂ ತೆರವಾಗುವ ಖಾಲಿ ಹುದ್ದೆಗೆ ನೇರ ಸಂಭಾವನೆ ಪೌರಕಾರ್ಮಿಕರನ್ನು ನಿಯೋಜಿಸುವ ಕುರಿತು ಮಾನದಂಡಗಳು.

ಉಲ್ಲೇಖ:-
1. ಸರ್ಕಾರದ ಆದೇಶ ಸಂಖ್ಯೆ: ನಅಇ 126 ಟಿಎಂಎಸ್ 2016 ಬೆಂಗಳೂರು, ದಿನಾಂಕ: 07-08-2017.
2. ಕಾರ್ಮಿಕ ಇಲಾಖೆಯ ಅಧಿಸೂಚನೆ ಸಂಖ್ಯೆ: ಕಾಇ 92 ಎಲ್‌ಡಬ್ಲ್ಯೂಎ 2017 ಬೆಂಗಳೂರು, ದಿನಾಂಕ: 27-10-2017.
3. ಮಾನ್ಯ ಆಯುಕ್ತರವರ ಕಛೇರಿ ಆದೇಶ ಸಂಖ್ಯೆ:ಆ.ಆ.ಶಾ/ಪಿ.ಆರ್/2250/2017-18 ದಿ:22-12-2017.
4. ಮಾನ್ಯ ಆಯುಕ್ತರವರ ಕಛೇರಿ ಆದೇಶ ಸಂಖ್ಯೆ:ಆ.ಆ.ಶಾ/ಪಿ.ಆರ್/2054/17-18, ದಿ:26-02-2018.
5. ಜಂಟಿ ಆಯುಕ್ತರು (ಘತ್ಯಾಜ್ಯ)ರವರ ಸಭಾ ನಡವಳಿ ದಿನಾಂಕ:02.04.2018.
6. ಮಾನ್ಯ ಆಯುಕ್ತರವರ ಸಭಾ ನಡವಳಿ ದಿನಾಂಕ:25.05.2018.
7. ಮಾನ್ಯ ಆಯುಕ್ತರವರ ಸಭಾ ನಡವಳಿ ದಿನಾಂಕ:17.06.2019.
8. ಪಾಲಿಕೆಯ ಸಾಮಾನ್ಯ ಸಭೆಯ ವಿಷಯ ಸಂಖ್ಯೆ:38(446)/2019-20 ದಿನಾಂಕ:31.08.2019ರ ನಿರ್ಣಯ.

*****

ಉಲ್ಲೇಖ (1) ರ ಸರ್ಕಾರಿ ಆದೇಶ, ಉಲ್ಲೇಖ (2) ಕಾರ್ಮಿಕ ಇಲಾಖೆಯ ಅಧಿಸೂಚನೆಯಂತೆ ಪಾಲಿಕೆಯಲ್ಲಿ ಗುತ್ತಿಗೆದಾರರ ಮುಖಾಂತರ ಸ್ವಚ್ಛತೆಯಲ್ಲಿ ತೊಡಗಿದ ಪೌರಕಾರ್ಮಿಕರಿಗೆ ಪಾಲಿಕೆಯು ಉಲ್ಲೇಖ(3)ರನ್ವಯ ದಿನಾಂಕ:01.01.2018 ರಿಂದ ಅನ್ವಯವಾಗುವಂತೆ ಬಯೋಮೆಟ್ರಿಕ್ ಹಾಜರಾತಿ ಆಧಾರಿತ ಪಾಲಿಕೆಯಿಂದ ನೇರವಾಗಿ ಸಂಭಾವನೆ ಪಾವತಿಸಲು ಕ್ರಮವಹಿಸಲಾಗಿರುತ್ತದೆ.

ಮುಂದುವರೆದು ಉಲ್ಲೇಖ (4) ರಲ್ಲಿ 2 ವರ್ಷದ ಮೇಲ್ಪಟ್ಟು ಸೇವಾವಧಿಯನ್ನು ಪರಿಗಣಿಸಿ ವೇತನ ಸಂಭಾವನೆ ಮಾಡಲು, ತದನಂತರ ಉಲ್ಲೇಖ (5) ರಲ್ಲಿ 1 ವರ್ಷದ ಮೇಲ್ಪಟ್ಟು ಸೇವಾವಧಿಯನ್ನು ಪರಿಗಣಿಸಿ ವೇತನ ಸಂಭಾವನೆ ಮಾಡಲು ಸೂಚಿಸಲಾಗಿರುತ್ತದೆ.

ಉಲ್ಲೇಖ (6)ರನ್ವಯ ನಡೆಸಿದ ಸಭೆಯಲ್ಲಿ ಪಾಲಿಕೆಯ ಅನೇಕ ವಾರ್ಡ್‌ಗಳಲ್ಲಿ 1 ವರ್ಷಕ್ಕಿಂತ ಕಡಿಮೆ ಅವಧಿಯ ಸೇವೆಯನ್ನು ಹೊಂದಿರುವ ಪೌರಕಾರ್ಮಿಕರಿಗೆ ಸೇವೆ ಸಲ್ಲಿಸಿದ ಅವಧಿಗೆ ವೇತನವನ್ನು ಪಾವತಿಸಿ ಸ್ವಚ್ಛತಾ ಕೆಲಸದ ಬಯೋಮೆಟ್ರಿಕ್ ಹಾಜರಾತಿ ಪದ್ಧತಿಯಿಂದ ತೆಗೆದುಹಾಕಬೇಕಾಗಿ ಹಾಗೂ ಕೆಲವೊಂದು ವಾರ್ಡ್‌ಗಳಲ್ಲಿ 60 ವರ್ಷಕ್ಕಿಂತ ಅಧಿಕ ವಯಸ್ಸಾಗಿರುವ ಕಾರ್ಮಿಕರು ಸ್ವಚ್ಛತಾ ಕಾರ್ಯದಲ್ಲಿ ತೊಡಗಿದ್ದು, ಕಾರ್ಮಿಕ ಇಲಾಖೆಯ ನಿಯಮಗಳಂತೆ 60 ವರ್ಷಕ್ಕಿಂತ ಮೇಲ್ಪಟ್ಟ ಕಾರ್ಮಿಕರನ್ನು ಸ್ವಚ್ಛತಾ ಕೆಲಸದಿಂದ ತೆಗೆದುಹಾಕಬೇಕಾಗಿ ಸೂಚಿಸಲಾಗಿರುತ್ತದೆ.

ಪಾಲಿಕೆಯ ಸ್ವಚ್ಛತಾ ಕಾರ್ಯದಲ್ಲಿ ತೊಡಗಿರುವ ಕಾರ್ಮಿಕರು ಕೆಲಸ ನಿರ್ವಹಿಸುವ ಸಮಯದಲ್ಲಿ ಅಪಘಾತದಿಂದ ಮೃತರಾದಲ್ಲಿ, ಮೃತ ಕಾರ್ಮಿಕರ ಅವಲಂಬಿತರಿಗೆ ಪಾಲಿಕೆಯವತಿಯಿಂದ ರೂ:10.00 ಲಕ್ಷಗಳ ಪರಿಹಾರ ಧನವನ್ನು ವಿತರಿಸಲು ಕ್ರಮವಹಿಸಲಾಗಿರುತ್ತದೆ. ಪಾಲಿಕೆಯ ಅಧಿಕಾರಿಗಳೊಂದಿಗೆ ಹಾಗೂ

ಪೌರಕಾರ್ಮಿಕರ ಮುಖಂಡರುಗಳೊಂದಿಗೆ ಉಲ್ಲೇಖ (7) ರನ್ವಯ ದಿನಾಂಕ:17.06.2019 ರಂದು ನಡೆಸಿದ ಸಭೆಯಲ್ಲಿ ಸೇವೆಯಲ್ಲಿರುವ ಇತರೆ ನೇರ ಸಂಭಾವನೆ ಪೌರಕಾರ್ಮಿಕರು ಯಾವುದೇ ಕಾರಣದಿಂದಲೂ ಸಹಜವಾಗಿ ಮೃತಪಟ್ಟರೆ ಅವರ ಕುಟುಂಬದ ಅವಲಂಬಿತರಿಗೂ ಸಹ ರೂ:10.00 ಲಕ್ಷಗಳ ಪರಿಹಾರವನ್ನು ನೀಡಲು ತೀರ್ಮಾನಿಸಲಾಗಿರುತ್ತದೆ.

ನೇರ ಸಂಭಾವನೆ ಪೌರಕಾರ್ಮಿಕರು ಪಾಲಿಕೆಯ ಅತಿ ತುರ್ತು, ಸೂಕ್ಷ್ಮ ಹಾಗೂ ಮೂಲಭೂತ ಕಾರ್ಯವಾದ ಸ್ವಚ್ಛತೆ ಕೆಲಸವನ್ನು ನಿರ್ವಹಿಸಿ, ಕೆಲಸ ನಿರ್ವಹಿಸಿದ ಅವಧಿಗೆ ಮಾತ್ರ ವೇತನ ಪಡೆದು 60 ವರ್ಷದ ಸೇವೆಯ ನಂತರ ಇಪಿಎಫ್ ಹೊರತುಪಡಿಸಿ ಪಾಲಿಕೆಯಿಂದ ಯಾವುದೇ ಆರ್ಥಿಕ ಸವಲತ್ತುಗಳಿಲ್ಲದೇ ನಿರ್ಗಮಿಸುವುದು ತುಂಬಾ ವಿಷಾದನೀಯ ಸಂಗತಿಯಾಗಿದ್ದು, 60 ವರ್ಷದ ನಿವೃತ್ತಿಯ ತರುವಾಯ ಅಂತಹ ಇಳಿಯ ವಯಸ್ಸಿನಲ್ಲಿ ಬೇರೊಂದು ಕೆಲಸವನ್ನು ಹುಡುಕಬೇಕಾದ ದುಸ್ಥಿತಿ ಎದುರಿಸಬಹುದಾಗಿರುತ್ತದೆ. ಅಲ್ಲದೇ ಪೌರಕಾರ್ಮಿಕರು ಕೆಲಸ ನಿರ್ವಹಣೆಯ ಸಮಯದಲ್ಲಿ ಕೆಲವೊಂದು ಕಾರ್ಮಿಕರು ರಸ್ತೆ ಅಪಘಾತ/ವೈದ್ಯಕೀಯ ಕಾರಣಗಳಿಂದ ಮೃತರಾಗುತ್ತಿರುವುದರಿಂದ ಪೌರಕಾರ್ಮಿಕರ ಸಂಖ್ಯೆ ಕಡಿಮೆಯಾಗುತ್ತಿದ್ದು, ಸ್ವಚ್ಛತೆಗೆ ಅಡಚಣೆ ಉಂಟಾಗುತ್ತಿದ್ದು, ಈ ಎಲ್ಲಾ ವಿಷಯಗಳ ಕುರಿತು ದಿನಾಂಕ:31.08.2019ರಂದು ನಡೆದ ಪಾಲಿಕೆಯ ಸಾಮಾನ್ಯ ಸಭೆಯಲ್ಲಿ ವಿಷಯವನ್ನು ಮಂಡಿಸಲಾಗಿರುತ್ತದೆ.

ಪಾಲಿಕೆಯ ಸಾಮಾನ್ಯ ಸಭೆಯ ವಿಷಯ ಸಂಖ್ಯೆ: 38(446)/2019-20 ದಿನಾಂಕ:31.08.2019 ರಲ್ಲಿ "ಪಾಲಿಕೆಯಲ್ಲಿ ಕನಿಷ್ಠ 05 ವರ್ಷಗಳ ಅವಧಿಗೆ ಪೌರಕಾರ್ಮಿಕರಾಗಿ ಕಾರ್ಯನಿರ್ವಹಿಸುವವರಿಗೆ ಮಾತ್ರ ಅನ್ವಯಿಸುವ ಷರತ್ತಿನೊಂದಿಗೆ ನಿರ್ಣಯಿಸಲಾಗಿರುತ್ತದೆ". ಪರಿಹಾರ ಕುರಿತಾದ ಉಲ್ಲೇಖ (7)ರ ಹಾಗೂ ಈ ಹಿಂದಿನ ಎಲ್ಲಾ ಆದೇಶಗಳನ್ನು ಹಿಂಪಡೆದು ಹಾಗೂ ಈಗಾಗಲೇ ಪಾಲಿಕೆಯವತಿಯಿಂದ ಯಾವುದಾದರೂ ಪ್ರಕರಣದಲ್ಲಿ ಪರಿಹಾರವನ್ನು ಪಡೆದಿದ್ದಲ್ಲಿ ಮತ್ತೊಮ್ಮೆ ಪರಿಹಾರ/ಅನುಕಂಪದ ಮೇಲೆ ನೇರ ಸಂಭಾವನೆ ಪೌರಕಾರ್ಮಿಕರಾಗಿ ನಿಯೋಜಿಸುವ ಅವಕಾಶ ನೀಡದ ಷರತ್ತಿಗೊಳಪಟ್ಟು ಈ ಕೆಳಕಂಡಂತೆ ವಲಯದ ಅಧಿಕಾರಿಗಳು ಅಗತ್ಯ ಕ್ರಮವಹಿಸಲು ಸೂಚಿಸಿದೆ.

<u>ಅ: ವಯೋ ನಿವೃತ್ತಿಗೆ ಮಾನದಂಡಗಳು:</u>

1. 60 ವರ್ಷ ವಯೋಮಾನ ಹೊಂದಿ, ಈ ತಹಲ್‌ವರೆವಿಗೂ ಸ್ವಚ್ಛತಾ ಕಾರ್ಯದಲ್ಲಿ ಮುಂದುವರೆದಿರುವ ನೇರ ವೇತನ ಪಾವತಿಯ ಪೌರಕಾರ್ಮಿಕರನ್ನು ಆಗಸ್ಟ್ 2019 ರ ತಿಂಗಳವರೆವಿಗೂ ಅಂತಿಮ ವೇತನ ಪಾವತಿ ಮಾಡಿ ಕೆಲಸದಿಂದ ತೆಗೆದುಹಾಕುವುದು.
2. ಈ ಪ್ರಕ್ರಿಯೆಯಲ್ಲಿ ಈ ಹಿಂದೆ ನೀಡಿರುವ ದಾಖಲೆಗಳ ಪ್ರಕಾರ ಜನ್ಮ ದಿನಾಂಕದ ಬದಲಿಗೆ ನೀಡುವ ಹೊಸ/ಬದಲಿ ವಯೋಮಾನದ ದೃಢೀಕರಣವನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ. ಒಂದೊಮ್ಮೆ ಸದರಿ ಬದಲಿ ಜನ್ಮ ದಿನಾಂಕದ ಪ್ರಸ್ತಾವನೆಗಳು ಸಲ್ಲಿಕೆಯಾದಲ್ಲಿ, ಈ ರೀತಿ ಸಲ್ಲಿಕೆಯಾಗುವ ಹೊಸ ಜನ್ಮ ದಿನಾಂಕಗಳ ಕುರಿತು ಸರ್ಕಾರಿ ಆಸ್ಪತ್ರೆಯ ವೈದ್ಯರಿಂದ ಮೂಳೆ ಪರೀಕ್ಷೆ ಮಾಡಿಸಿ ವಯಸ್ಸಿನ ನಿಖರತೆಯನ್ನು ಸೂಕ್ತ ಸರ್ಕಾರಿ ವೈದ್ಯಕೀಯ ದಾಖಲೆಗಳನ್ನು ವಲಯ ಮಟ್ಟದಲ್ಲಿ ಪರಿಶೀಲಿಸಿಕೊಂಡು, ಸ್ಪಷ್ಟ ಅಭಿಪ್ರಾಯದೊಂದಿಗೆ ಸಮುಚಿತ ಮಾರ್ಗದಲ್ಲಿ ಕಡತ ಮಂಡಿಸಿ, ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದುಕೊಂಡ ನಂತರ ಕ್ರಮವಹಿಸುವುದು.

<u>ಆ: ವಯೋ ನಿವೃತ್ತಿಯ ನಂತರ ಪರಿಹಾರ ನೀಡುವ ಪ್ರಕ್ರಿಯೆಯ ಮಾನದಂಡಗಳು:</u>

1. ಪಾಲಿಕೆಯಲ್ಲಿ ಗುತ್ತಿಗೆದಾರರಡಿ ಸೇವೆ ಸಲ್ಲಿಸಿ, ಘನತ್ಯಾಜ್ಯ ನಿರ್ವಹಣೆ ಕೆಲಸದಲ್ಲಿ ದಿನಾಂಕ:01.01.2018 ರಿಂದ ನೇರ ಸಂಭಾವನೆ ಪಾವತಿಯಡಿಯಲ್ಲಿ ನಿಯಮಾನುಸಾರ ನಿಯೋಜನೆಗೊಂಡು, ಈವರೆವಿಗೂ ಗುತ್ತಿಗೆದಾರರು ಹಾಗೂ ಪಾಲಿಕೆಯ ಬಯೋಮೆಟ್ರಿಕ್ ನೇರ ಸಂಭಾವನೆಯನ್ನೊಳಗೊಂಡಂತೆ ಒಟ್ಟು ಕನಿಷ್ಠ 05 ವರ್ಷಗಳ ಕಾಲ ಸೇವೆ ಸಲ್ಲಿಸಿರುವ ಬಗ್ಗೆ ಅಗತ್ಯ ದಾಖಲೆಗಳಾದ ಮಾಹೆಯಾನ ಹಾಜರಾತಿ ವಿವರ, ಇಎಸ್‌ಐ, ಇಪಿಎಫ್, ಗುತ್ತಿಗೆದಾರರಡಿ ಚೆಕ್ ಮುಖಾಂತರ ಬ್ಯಾಂಕ್ ಖಾತೆಗೆ ವೇತನ ಪಾವತಿಯಾದ ವಿವರ, ಬಯೋಮೆಟ್ರಿಕ್ ನೇರ ಸಂಭಾವನೆ ಇತ್ಯಾದಿ ದಾಖಲೆಗಳನ್ನು ಪರಿಶೀಲಿಸಿ ಖಚಿತಪಡಿಸಿಕೊಂಡು 60 ವರ್ಷಗಳ ವಯೋ ನಿವೃತ್ತಿ ಹೊಂದಿರುವ/ಹೊಂದುವ ನೇರ ಸಂಭಾವನೆ ಪೌರಕಾರ್ಮಿಕರ ಕುಟುಂಬದ ಒಬ್ಬ ಅವಲಂಬಿತರನ್ನು (ಪಾಲಿಕೆಯ ಖಾಯಂ ಪೌರಕಾರ್ಮಿಕರಿಗೆ ಅನ್ವಯವಾಗುವ ಅನುಕಂಪದ ಆಧಾರದ ನೇಮಕಾತಿಯ ನಿಯಮಗಳನ್ವಯ ಅವಲಂಬಿತರನ್ನು ನಿಯೋಜಿಸಿಕೊಳ್ಳುವ

ಷರತ್ತಿಗೊಳಪಟ್ಟು) ನಿವೃತ್ತಿಯಾಗುವ ಪೌರಕಾರ್ಮಿಕರಿಂದ ಖಾಲಿಯಾಗುವ ಜಾಗಕ್ಕೆ ನೇರ ಸಂಭಾವನೆ ಪಾವತಿಯಡಿಯಲ್ಲಿ ನಿಯೋಜಿಸಿಕೊಳ್ಳುವುದು.

2. ಈ ರೀತಿ ವಯೋನಿವೃತ್ತಿಯ ನಂತರ ನಿಯೋಜಿಸಿಕೊಳ್ಳುವ ವ್ಯಕ್ತಿಯು, ನಿವೃತ್ತಿ ಹೊಂದಿದ ವ್ಯಕ್ತಿ ಯಾವ ವಾರ್ಡ್‌ನಲ್ಲಿ, ಯಾವ ಕಾರ್ಯಸ್ಥಳದಲ್ಲಿ ಕೆಲಸ ನಿರ್ವಹಿಸುತ್ತಿದ್ದರೋ ಅದೇ ಸ್ಥಳದಲ್ಲಿ ನೇರ ಸಂಭಾವನೆ ಪೌರಕಾರ್ಮಿಕರಾಗಿ ಕೆಲಸ ನಿರ್ವಹಿಸಲು ನಿಯೋಜಿಸತಕ್ಕದ್ದು. 60 ವರ್ಷದ ವಯೋ ನಿವೃತ್ತಿಯ ನಂತರ ತೆರವಾಗುವ ಸ್ಥಳಕ್ಕೆ ಒಬ್ಬ ವಾರಸುದಾರರು ಒಮ್ಮೆ ನಿಯೋಜಿತಗೊಂಡಲ್ಲಿ ಯಾವುದೇ ಕಾರಣಕ್ಕೂ ಅವರನ್ನು ಬದಲಾಯಿಸತಕ್ಕುದಲ್ಲ.

3. 60 ವರ್ಷ ವಯೋನಿವೃತ್ತಿಯ ನೇರ ವೇತನ ಪಾವತಿ ಪೌರಕಾರ್ಮಿಕರ ಕುಟುಂಬದ ಅವಲಂಬಿತರಲ್ಲಿ ಪೌರಕಾರ್ಮಿಕರಾಗಿ ಕೆಲಸ ಮಾಡುವ ಅರ್ಹ ಸದಸ್ಯರು ಯಾರು ಇಲ್ಲದೇ ಇದ್ದ ಪಕ್ಷದಲ್ಲಿ ರೂ: 10.00 (ಹತ್ತು) ಲಕ್ಷಗಳ ಒಂದು ಬಾರಿಯ ಹಿಡುಗಂಟು (ಲಂಪ್ಸಮ್) ಮೊತ್ತವನ್ನು ವಯೋನಿವೃತ್ತ ನೇರ ಸಂಭಾವನೆ ಪದ್ಧತಿಯಲ್ಲಿ ಕಾರ್ಯನಿರ್ವಹಿಸಿದ ಪೌರಕಾರ್ಮಿಕರ ಹಾಗೂ ಪಾಲಿಕೆಯ ಆಯುಕ್ತರ ಜಂಟಿ ಖಾತೆಯಲ್ಲಿ ಠೇವಣಿಯಿಟ್ಟು (Fixed Deposit), ಈ ಠೇವಣಿಯಿಂದ ಲಭ್ಯವಾಗುವ ಬಡ್ಡಿ ಮೊತ್ತವನ್ನು ಮಾಹೆಯಾನ ಪಿಂಚಣಿ ರೂಪದಲ್ಲಿ ಪರಿಹಾರವಾಗಿ ದೈನಂದಿನ ಜೀವನ ನಿರ್ವಹಣೆಗೆ ಜೀವಿತ ಅವಧಿಯವರೆವಿಗೂ ನೀಡುವುದು. ಸದರಿ ವ್ಯಕ್ತಿಯ ಮರಣದ ನಂತರ ಠೇವಣಿ ಮೊತ್ತವನ್ನು ಪಾಲಿಕೆಯ ಸುಪರ್ದಿಗೆ ಹಿಂಪಡೆಯುವುದು.

4. 60 ವರ್ಷ ವಯೋನಿವೃತ್ತಿಯ ನೇರ ವೇತನ ಪಾವತಿ ಪೌರಕಾರ್ಮಿಕರ ಕುಟುಂಬದ ಅವಲಂಬಿತರಲ್ಲಿ ಪೌರಕಾರ್ಮಿಕರಾಗಿ ಕೆಲಸ ಮಾಡುವ ಅರ್ಹ ಸದಸ್ಯರು ಯಾರು ಇಲ್ಲದೇ ಇದ್ದ ಪಕ್ಷದಲ್ಲಿ ಖಾಲಿಯಾಗುವ ಸ್ಥಳಕ್ಕೆ 60 ವರ್ಷ ವಯೋನಿವೃತ್ತಿ ಹೊಂದಿದ ನೇರ ವೇತನ ಪೌರಕಾರ್ಮಿಕರ ಬದಲಿಗೆ, ದಿನಾಂಕ:31.12.2017ಕ್ಕೆ ಒಂದು ವರ್ಷಕ್ಕಿಂತ ಕಡಿಮೆ ಸೇವಾ ಅವಧಿ ಹೊಂದಿರುವ 3300 ಸಂಖ್ಯೆ ಪೌರಕಾರ್ಮಿಕರ ಪಟ್ಟಿಯಲ್ಲಿ ಸೇವಾ ಜೇಷ್ಠತೆಯನ್ನು ಹೊಂದಿರುವ ಬಯೋಮೆಟ್ರಿಕ್ ಹಾಜರಾತಿಯಲ್ಲಿ ನೊಂದಣಿ ಹೊಂದಿರುವ, ಸೇವಾ ಜೇಷ್ಠತೆಯ ಬಗ್ಗೆ ಯಾವುದೇ ತಕರಾರು ಹೊಂದಿರದ ಅರ್ಹ ಕಾರ್ಮಿಕರನ್ನು ನಿಯೋಜಿಸಿಕೊಳ್ಳುವುದು. ನಿವೃತ್ತಿ ಹೊಂದಿದ ವ್ಯಕ್ತಿ ಯಾವ ವಾರ್ಡ್‌ನಲ್ಲಿ, ಯಾವ ಕಾರ್ಯಸ್ಥಳದಲ್ಲಿ ಕೆಲಸ ನಿರ್ವಹಿಸುತ್ತಿದ್ದರೋ ಅದೇ ಸ್ಥಳದಲ್ಲಿ ನೇರ ಸಂಭಾವನೆ ಪೌರಕಾರ್ಮಿಕರಾಗಿ ಕೆಲಸ ನಿರ್ವಹಿಸಲು ನಿಯೋಜಿಸತಕ್ಕದ್ದು.

5. ನೇರ ಸಂಭಾವನೆ ಪೌರಕಾರ್ಮಿಕರ ನಿವೃತ್ತಿ/ಮರಣ ಪರಿಹಾರ/ಪಿಂಚಣಿ ಹಾಗೂ ಅವಲಂಬಿತರ ನಿಯೋಜನೆಯು ದಿನಾಂಕ:01.01.2018 ರಿಂದ ತಹಲ್‌ವರೆವಿಗೆ ಕಾರ್ಯನಿರ್ವಹಿಸಿದ/ ಕಾರ್ಯನಿರ್ವಹಿಸುತ್ತಿರುವ ಅರ್ಹ ನೇರ ಸಂಭಾವನೆ ಪೌರಕಾರ್ಮಿಕರಿಗೆ ದಿನಾಂಕ:01.01.2018 ರಿಂದ ಅನ್ವಯವಾಗುವುದು.

ಇ: <u>ಕರ್ತವ್ಯ ನಿರ್ವಹಣೆಯ ಸಮಯದಲ್ಲಿ ಮೃತರಾದ ನೇರ ಸಂಭಾವನೆ ಪೌರಕಾರ್ಮಿಕರ ಅವಲಂಬಿತರಿಗೆ ಪರಿಹಾರ ನೀಡುವ ಪ್ರಕ್ರಿಯೆಯ ಮಾನದಂಡಗಳು:</u>

1. ದಿನಾಂಕ:31.12.2017 ಕ್ಕೆ ಅನ್ವಯವಾಗುವಂತೆ 1 ವರ್ಷದ ಸೇವಾವಧಿಯನ್ನು ಹೊಂದಿ ತಹಲ್‌ವರೆವಿಗೆ ನೇರ ಸಂಭಾವನೆಯಡಿಯಲ್ಲಿ ಸ್ವಚ್ಛತಾ ಕರ್ತವ್ಯದಲ್ಲಿ ತೊಡಗಿರುವ ಪೌರಕಾರ್ಮಿಕರು ಮೃತರಾದಲ್ಲಿ ತಕ್ಷಣ ಶವ ಸಂಸ್ಕಾರ ವಿಧಿ ವಿಧಾನಗಳಿಗೆ ರೂ: 20,000/- (ಇಪ್ಪತ್ತು ಸಾವಿರಗಳು ಮಾತ್ರ) ಗಳನ್ನು ಬಿಡುಗಡೆ ಮಾಡುವುದು.

2. ನೇರ ಸಂಭಾವನೆ ಮೂಲಕ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಅಪಘಾತದಿಂದ ಮೃತರಾದಲ್ಲಿ ಮಾನವೀಯತೆಯ ಹಿತದೃಷ್ಟಿಯಿಂದ ಪಾಲಿಕೆಯವತಿಯಿಂದ ಈಗಾಗಲೇ ಮೃತರ ಅವಲಂಬಿತರಿಗೆ ರೂ:10.00 ಲಕ್ಷಗಳನ್ನು ಪರಿಹಾರವಾಗಿ ನೀಡಲಾಗುತ್ತಿದ್ದು, ಪೌರಕಾರ್ಮಿಕರು ಮಾರಣಾಂತಿಕ ಕಾಯಿಲೆಗಳಾದ ಕ್ಯಾನ್ಸರ್, ಹೃದಯಾಘಾತ, ಕಿಡ್ನಿ ವೈಫಲ್ಯ ಮತ್ತು ಸ್ವಚ್ಛತಾ ಕಾರ್ಯದ ನಿರ್ವಹಣೆಯಿಂದ ಬರುವಂತಹ ಇತರೆ ಕಾಯಿಲೆಗಳಿಂದ ಸಹಜವಾಗಿ ಮೃತರಾದಲ್ಲಿ ಅಧಿಕೃತ ವೈದ್ಯಕೀಯ ದಾಖಲೆಗಳನ್ನು ಪರಿಶೀಲಿಸಿಕೊಂಡು ಮೃತ ವ್ಯಕ್ತಿಯ ನೈಜ/ಕಾನೂನು ಉತ್ತರಾಧಿಕಾರಿಗೆ ಮೃತ ಪೌರಕಾರ್ಮಿಕರಿಂದ ಖಾಲಿಯಾಗುವ ಜಾಗಕ್ಕೆ ಮೃತರ ಅವಲಂಬಿತರಲ್ಲಿ ಒಬ್ಬರನ್ನು (ಪಾಲಿಕೆಯ ಖಾಯಂ ಪೌರಕಾರ್ಮಿಕರಿಗೆ ಅನ್ವಯವಾಗುವ ಅನುಕಂಪದ ಆಧಾರದ ನೇಮಕಾತಿಯ

ನಿಯಮಗಳನ್ವಯ ಅವಲಂಬಿತರನ್ನು ನಿಯೋಜಿಸಿಕೊಳ್ಳುವ ಷರತ್ತಿಗೊಳಪಟ್ಟು) ನೇರ ಸಂಭಾವನೆ ಪಾವತಿಯಡಿಯಲ್ಲಿ ನಿಯೋಜಿಸಿಕೊಳ್ಳುವುದು ಅಥವಾ ರೂ.10.00 (ಹತ್ತು) ಲಕ್ಷಗಳ ಒಂದು ಬಾರಿಯ ಇಡುಗಂಟು (ಲಂಪ್ಸಮ್) ಮೊತ್ತವನ್ನು ಮೃತರ ಅವಲಂಬಿತ ನೈಜ/ಕಾನೂನು ಉತ್ತರಾಧಿಕಾರಿಗೆ ಪಾವತಿಸುವುದು. ಇದರ ಆಯ್ಕೆಯು ಮೃತರ ನೈಜ ವಾರಸುದಾರರು/ಕಾನೂನು ಉತ್ತರಾಧಿಕಾರಿಗೆ ಸೇರಿದ್ದು.

೩. ಈಗಾಗಲೇ ಪಾಲಿಕೆಯವತಿಯಿಂದ ಮೇಲ್ಕಂಡ ಯಾವುದಾದರೂ ಪ್ರಕರಣದಲ್ಲಿ ಪರಿಹಾರವನ್ನು ಪಡೆದಿದ್ದಲ್ಲಿ, ಮತ್ತೊಮ್ಮೆ ಪರಿಹಾರವನ್ನು ಪಡೆಯಲು ಅರ್ಹತೆಯಿರುವುದಿಲ್ಲ.

**ಈ: ಮೃತರಿಗೆ ಪರಿಹಾರ, ಮೃತ/ವಯೋ ನಿವೃತ್ತಿ ಹೊಂದಿದ ಕಾರ್ಮಿಕರ ಬದಲಿಗೆ ನಿಯೋಜನೆ ಮಾಡುವ ಪ್ರಾಧಿಕಾರದ ಕುರಿತು.**

1. ವಲಯದ ಅಧೀಕ್ಷಕ ಅಭಿಯಂತರರು, ಸಂಬಂಧಪಟ್ಟ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು (ಘತ್ಯಾನಿ), ವಿಭಾಗದ ಆರೋಗ್ಯ ವೈದ್ಯಾಧಿಕಾರಿ, ವಾರ್ಡ್‌ನ ಹಿರಿಯ/ಕಿರಿಯ/ಘನತ್ಯಾಜ್ಯ ಪರಿವೀಕ್ಷಕರುರವರನ್ನೊಳಗೊಂಡ ವಲಯಮಟ್ಟದ ಸಮಿತಿಯು ಅಗತ್ಯ ದಾಖಲೆಗಳನ್ನು ಪರಿಶೀಲಿಸಿಕೊಂಡು, ಮೃತ/ವಯೋ ನಿವೃತ್ತಿ ಹೊಂದಿದ ಕಾರ್ಮಿಕರ ಬದಲಿಗೆ ನಿಯೋಜನೆ ಮಾಡುವ ಬಗ್ಗೆ ನಿರ್ಧಾರ ತೆಗೆದುಕೊಂಡು, ವಲಯದ ಮುಖಾಂತರ ಸಮುಚಿತ ಮಾರ್ಗದಲ್ಲಿ ಸಕ್ಷಮ ಪ್ರಾಧಿಕಾರದ ಅನುಮೋದನೆಗಾಗಿ ಕೇಂದ್ರ ಕಛೇರಿಗೆ ಸಲ್ಲಿಸುವುದು. ಈ ಸಂಬಂಧ ಯಾವುದಾದರೂ ಕಾನೂನಾತ್ಮಕ ಸಮಸ್ಯೆಗಳಿದ್ದಲ್ಲಿ ಆಯಾ ವಲಯದ ಜಂಟಿ ಆಯುಕ್ತರು ಮೇಲ್ಮನವಿ ಪ್ರಾಧಿಕಾರವಾಗಿರುತ್ತಾರೆ.

2. ವಲಯದ ಅಧಿಕಾರಿಗಳನ್ನೊಳಗೊಂಡ ಸಮಿತಿಯು ಮೃತ/ವಯೋನಿವೃತ್ತಿ ಹೊಂದಿದ ನೇರ ಸಂಭಾವನೆ ಪೌರಕಾರ್ಮಿಕರ ಅವಲಂಬಿತರನ್ನು ನಿಯೋಜಿಸಿಕೊಳ್ಳುವ ಬಗ್ಗೆ ತೀರ್ಮಾನ ತೆಗೆದುಕೊಂಡು ಅನುಮೋದನೆಗಾಗಿ ಪ್ರಸ್ತಾವನೆಯನ್ನು ಸಮುಚಿತ ಮಾರ್ಗದಲ್ಲಿ ಕೇಂದ್ರ ಕಛೇರಿಗೆ ಸಲ್ಲಿಸಿ, ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದುಕೊಂಡ ನಂತರ ಇಂತಹ ಪ್ರಕರಣಗಳಲ್ಲಿ ನಿಯೋಜಿತರಾಗುವ ಕಾರ್ಮಿಕರ ಹೆಸರುಗಳನ್ನು ಬಯೋಮೆಟ್ರಿಕ್ ವ್ಯವಸ್ಥೆಯಲ್ಲಿ ಸೇರ್ಪಡೆಗೊಳಿಸುವ ಬಗ್ಗೆ ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರು (ಘತ್ಯಾನಿ)ರವರು ಕ್ರಮವಹಿಸುವುದು. ಮುಂದುವರೆದು ಈ ರೀತಿಯ ಪ್ರಕರಣಗಳ ಕುರಿತಾದ ಸಂಪೂರ್ಣ ದಾಖಲಾತಿಗಳನ್ನು ನೇರ ಸಂಭಾವನೆ ಹೆಚ್‌ಆರ್‌ಎಂಎಸ್‌ನಲ್ಲಿ ಲಭ್ಯವಾಗುವಂತೆ ಅಗತ್ಯ ಕ್ರಮವಹಿಸುವುದು.

೩. ಮೃತರ/ವಯೋನಿವೃತ್ತಿ ಹೊಂದುವ ನೇರ ಸಂಭಾವನೆ ಪೌರಕಾರ್ಮಿಕರಿಗೆ ನೀಡಬೇಕಾದ ಪರಿಹಾರ/ನೇರ ಸಂಭಾವನೆ ಪೌರಕಾರ್ಮಿಕರ ಹಾಗೂ ಪಾಲಿಕೆಯ ಆಯುಕ್ತರ ಜಂಟಿ ಖಾತೆಯಲ್ಲಿ ಠೇವಣಿಯಿಡುವ (Fixed Deposit), ಈ ಠೇವಣಿಯಿಂದ ಲಭ್ಯವಾಗುವ ಬಡ್ಡಿ ಮೊತ್ತವನ್ನು ಮಾಹೆಯಾನ ಪಿಂಚಣಿ ರೂಪದಲ್ಲಿ ಪರಿಹಾರವಾಗಿ ನೀಡುವ ಕುರಿತಾದ ಪ್ರಸ್ತಾವನೆಗಳನ್ನು ಮೇಲ್ಕಾಣಿಸಿದ ಕ್ರಮ ಸಂ.(1)ರ ವಲಯಮಟ್ಟದ ಸಮಿತಿಯಲ್ಲಿ ಅಗತ್ಯ ದಾಖಲೆಗಳನ್ನು ಮಂಡಿಸಿ, ಪರಿಶೀಲಿಸಿಕೊಂಡು, ನಿಯಮಾನುಸಾರ ತೀರ್ಮಾನಿಸಿ, ಸ್ಪಷ್ಟ ಶಿಫಾರಸ್ಸಿನ ಪ್ರಸ್ತಾವನೆಗಳನ್ನು ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ವಲಯಮಟ್ಟದಲ್ಲಿ ಡಿ.ಸಿ ಬಿಲ್ ಮುಖಾಂತರ ಪಾವತಿಸಲು/ಠೇವಣಿಯಿಡಲು ಕ್ರಮವಹಿಸುವುದು.

4. ಸಂಬಂಧಪಟ್ಟ ವಯೋನಿವೃತ್ತ ಕಾರ್ಮಿಕರು ಪ್ರತಿ ಮಾಹೆ ಆಯಾ ವಲಯದ ಉಪ/ಸಹಾಯಕ ನಿಯಂತ್ರಕರು (ಹಣಕಾಸು)ರವರಿಗೆ ಖುದ್ದಾಗಿ ಮನವಿ ಪತ್ರ ಸಲ್ಲಿಸಿ (ಬದುಕಿರುವ ಕುರಿತಂತೆ ಖಾತರಿಪಡಿಸಿಕೊಳ್ಳಲು ಹಾಗೂ ಯೋಜನೆಯ ನಿರಂತರತೆ ಕಾಪಾಡಲು) ಪಿಂಚಣಿ ಮೊತ್ತವನ್ನು ಪಡೆಯತಕ್ಕದ್ದು. ಈ ರೀತಿ ಪ್ರತಿ ಮಾಹೆ ಠೇವಣಿ ಮೊತ್ತದ ಬಡ್ಡಿಯನ್ನು ಪಿಂಚಣಿ ರೂಪದಲ್ಲಿ ಪಾವತಿಸುವ ಕುರಿತಾದ ಎಲ್ಲಾ ಪ್ರಸ್ತಾವನೆಗಳನ್ನು ವಲಯ ಮಟ್ಟದ ಉಪ/ಸಹಾಯಕ ನಿಯಂತ್ರಕರು (ಹಣಕಾಸು)ರಲ್ಲಿ ಏಕ ಕಡತದಲ್ಲಿ ನಿರ್ವಹಿಸತಕ್ಕದ್ದು. ಸದರಿ ವ್ಯಕ್ತಿಯ ಮರಣದ ನಂತರ ಠೇವಣಿ ಮೊತ್ತವನ್ನು ಪಾಲಿಕೆಯ ಸುಪರ್ದಿಗೆ ಹಿಂಪಡೆಯತಕ್ಕದ್ದು.

೫. ಮೃತ ಕಾರ್ಮಿಕರ ಅವಲಂಬಿತರಿಗೆ ಪರಿಹಾರ, ವಯೋನಿವೃತ್ತಿ ಹೊಂದುವ ಕಾರ್ಮಿಕರಿಗೆ ಇಡಿಗಂಟು ರೂಪದ ಪರಿಹಾರ/ಪಿಂಚಣಿ ಇತ್ಯಾದಿಗಳ ಕುರಿತು ಹಾಲಿ ಆಯವ್ಯಯದಲ್ಲಿ ಯಾವುದೇ ಅನುದಾನವನ್ನು ಮೀಸಲಿರಿಸದೇ ಇರುವುದರಿಂದ ಹಾಲಿ ನೇರ ಸಂಭಾವನೆ ಪೌರಕಾರ್ಮಿಕರ ವೇತನಕ್ಕೆ ಮೀಸಲಿರಿಸಿದ

ಅನುದಾನದಲ್ಲಿ ಭರಿಸುವುದು. 2019-20 ನೇ ಸಾಲಿನ ಆಯವ್ಯಯದ ಕಲ್ಯಾಣ ಕಾರ್ಯಕ್ರಮಗಳ ಅನುದಾನದಡಿ ನಿಧಿಯನ್ನು ಕಾಯ್ದಿರಿಸಲು ಮುಖ್ಯ ಲೆಕ್ಕಾಧಿಕಾರಿಗಳು ಕ್ರಮವಹಿಸುವುದು.

ಆಯುಕ್ತರು 28/10/2019

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ರವರಿಗೆ,

1. ವಲಯಗಳ ಅಪರ/ಜಂಟಿ ಆಯುಕ್ತರುರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
2. ವಲಯಗಳ ಅಧೀಕ್ಷಕ ಅಭಿಯಂತರರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
3. ವಲಯಗಳ ಉಪ/ಸಹಾಯಕ ನಿಯಂತ್ರಕರು (ಹಣಕಾಸು)ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
4. ವಿಭಾಗಗಳ ಸಹಾಯಕ ಕಾರ್ಯಪಾಲಕ ಅಭಿಯಂತರರು (ಫತ್ಯಾನಿ)ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
5. ಕಾರ್ಯಪಾಲಕ ಅಭಿಯಂತರರು (ಫತ್ಯಾನಿ-03)ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
6. ಮುಖ್ಯ ಲೆಕ್ಕಾಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.

ಪ್ರತಿಯನ್ನು:

1. ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
2. ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
3. ಮಾನ್ಯ ಅಧ್ಯಕ್ಷರು (ಸಾರ್ವಜನಿಕ ಸ್ಥಾಯಿ ಸಮಿತಿ)ರವರ ಅವಗಾಹನೆಗಾಗಿ ಸಲ್ಲಿಸಿದೆ.
4. ಮಾನ್ಯ ಅಧ್ಯಕ್ಷರು (ಲೆಕ್ಕ ಪತ್ರ ಸ್ಥಾಯಿ ಸಮಿತಿ) ರವರ ಅವಗಾಹನೆಗಾಗಿ ಸಲ್ಲಿಸಿದೆ.
5. ವಲಯಗಳಿಗೆ ನಿಯೋಜಿಸಿದ ವಿಶೇಷ ಆಯುಕ್ತರುರವರಿಗೆ ಮಾಹಿತಿಗಾಗಿ ಕಳುಹಿಸಿದೆ.
6. ಅಪರ ಆಯುಕ್ತರು (ಫತ್ಯಾನಿ)ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
7. ಜಂಟಿ ಆಯುಕ್ತರು (ಫತ್ಯಾನಿ) ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
8. ಮುಖ್ಯ ಅಭಿಯಂತರರು (ಫತ್ಯಾನಿ)ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
9. ಕಛೇರಿ ಪ್ರತಿ.